ದೇವರಸನಹಳ್ಳಿ: ಇನ್ನೂ ಮುಗಿಯದ ಪೋಲಿಸ್ ಸಂಚು

ನಂಜನಗೂಡು ತಾಲ್ಲೂಕ್ ದೇವರಸನ ಹಳ್ಳಿ ಯಲ್ಲಿ ನಾಲ್ಕು ಕೊಲೆಗಳಾಗಿದ್ದರೂ ಇದೂ ಸಾಲ ದೆಂಬಂತೆ ಪೋಲೀಸ್ ಅಧಿಕಾರಿಗಳು ಇನ್ನೂ ವರ್ತಿ ಸುತ್ತಿದ್ದಾರೆ. ನಂಜನಗೂಡು ಪೋಲೀಸ್ ಅಧಿ ಕಾರಿಗಳು ಮತ್ತು ನಯವಂಚಕ ಕಿತಾಪತಿ ಸಿದ್ದೇ ಗೌಡನ ಕುಮ್ಮಕ್ಕಿಗೆ ಸಿಕ್ಕೇ ತಮ್ಮ ಜಾತಿಯ ಎರಡು ಜನರು ಜೀವ ಕಳೆದುಕೊಳ್ಳಬೇಕಾಯ್ತೆಂಬ ನಿಜವನ್ನು ಒಕ್ಕಲಿಗರೂ ಈಗ ಮಾತಾಡುತ್ತಿದ್ದಾರೆ ಇದುವರೆಗೆ ಆಗಿರುವ ನಾಲ್ಕು ಕೊಲೆಯ ಹಿನ್ನೆಲೆ ಯಲ್ಲಿರುವ ಪೋಲೀಸ್ ಡಿವೈಎಸ್‌ಪಿ. ರಂಗದೊರೈ ಸರ್ಕಲ್ ಇನ್ಸ್‌ಪೆಕ್ಟರ್ ಸೋಮಶೇಖರರು ಈಗ ಲಾದರೂ ಸುಮ್ಮನಾಗದೆ ಮೊಕದ್ದಮೆ ತಿರುಚಲು ಪ್ರಯತ್ನಿಸುತ್ತಿರುವುದಾಗಿ ತಿಳಿದುಬಂದಿದೆ. ವಕ್ಕಲಿ ಗರು ಸಿಕ್ಕಿಹಾಕಿಕೊಂಡಿರುವ ಕೊಲೆ ಮೊಕದ್ದಮೆ ಯಲ್ಲಿ ಅವರು ಜಾಮೀನು ಸಿಕ್ಕುವಂತೆ ರೆಕಾರ್ಡ್ ಮಾಡಿ. ಹರಿಜನರು ಸಿಕ್ಕಿಹಾಕಿಕೊಂಡಿರುವ ಕೊಲೆ ಮೊಕದ್ದಮೆಯಲ್ಲಿ ನಿಜವಾದ ಅಪರಾಧಿಗಳಲ್ಲದವ ರನ್ನು ಸಿಕ್ಕಿಸಿ, ಇದರಿಂದ ಹರಿಜನರಲ್ಲಿ ರೋಷ ಉಂಟುಮಾಡಿ ಹರಿಜನರೇ ಮೇಲುಬಿದ್ದು ತಪ್ಪು ಮಾಡಿಯೋ ಕೊಲೆ ಮಾಡಿಯೋ ಉದ್ರೇಕ ಗೊಂಡಾಗ ಅವರನ್ನು ಆಗ ಸಕಾರಣವಾಗಿ ಸದೆ ಬಡಿಯಲು ನಂಜನಗೂಡು ಪೋಲೀಸ್ ಅಧಿಕಾರಿ ಗಳು ಕ್ರೂರವಾಗಿ ಯೋಚಿಸುತ್ತಿರುವುದು ತಿಳಿದು ಬಂದಿದೆ. ಈ ಕ್ರೂರತೆಯನ್ನು ದೇವರಸನಹಳ್ಳಿಯ ಒಕ್ಕಲಿಗರೂ ಹರಿಜನರೂ ಅರಿತುಕೊಳ್ಳಬೇಕು. ಪೋಲೀಸ್‌ಗೆ ಬೇಕಾಗಿರುವುದು ದೇವರಸನಹಳ್ಳಿಯ ಹೆಣ ಮತ್ತು ಹಣ ಎಂಬುದನ್ನು ಈ ಎರಡೂ ಕೋಮಿನವರೂ ಅರಿತು ಒಟ್ಟಿಗೆ ಪೋಲೀಸ್ ಸಂಚನ್ನು ಪ್ರತಿಭಟಿಸದಿದ್ದಲ್ಲಿ ಹರಿಜನರಿಗೂ ಉಳಿ ಗಾಲವಿಲ್ಲ; ಒಕ್ಕಲಿಗರಿಗೂ ಉಳಿಗಾಲವಿಲ್ಲ.

ಇದುವರೆಗೆ ಸತ್ತವರಿಗೆ ಸರ್ಕಾರ ಪರಿಹಾರ ಕೊಡದಿದ್ದರೂ, ಚಿಂತೆಯಿಲ್ಲ. ಆದರೆ ನ್ಯಾಯಾಂಗ ತನಿಖೆ ನಡೆಸಿ ಪೋಲೀಸ್ ಕರಾಳ ಹಸ್ತವನ್ನು ಕತ್ತರಿಸಿ ಮುಂದೆ ಕೊಲೆ ಹಲ್ಲೆಗಳಾಗದಂತೆ ತಡೆಗಟ್ಟಿದರೆ ಸಾಕು.

—ಸಂಪಾದಕ

ಕೆಂಡಗಳ ನಡುವೆ: ನಜೀರ್‌ಗೆ ಕೃತಜ್ಞತೆ

ಗುಂಡೂರಾಯರ ಕಾಂಗ್ರೆಸ್ ದುರಾಡಳಿತಕ್ಕೆ ಸವಾಲಾಗಿ ಹುಟ್ಟಿರುವ ಜನತಾ ಸರ್ಕಾರ ಜಾತ್ಯಾಂಧ ವ್ಯವಸ್ಥೆಯ ಬಗ್ಗೆ ನೊಂದು ಕೆಂಡವಾಗಿರುವ ದಲಿತರ ಸವಾಲುಗಳಿಗೆ ಹೇಗೆ ಉತ್ತರಿಸುತ್ತದೊ ಕಾದು ನೋಡಬೇಕಾಗಿದೆ. ವ್ಯವ ಸ್ಥೆಯ ಕ್ರೂರ ಮುಖಗಳ ಮೇಲೆ ಕವನಗಳ ಬರೆದದ್ದಕ್ಕೆ ಗುಂಡೂರಾಯರ ಕೆಂಗಣ್ಣಿಗೆ ಸಿಕ್ಕಿ ತಮ್ಮ ಬಿ. ಡಿ. ಓ. ಕೆಲಸದಿಂದ ಸಸ್ಪೆಂಡಾಗಿರುವ ದಲಿತ ಕವಿ ಶ್ರೀಮುನಿವೆಂಕಟಪ್ಪ ನವರ 'ಕೆಂಡಗಳ ನಡುವೆ' ಪ್ರಕರಣ ದಲ್ಲಿ ಜನತಾ ಸರ್ಕಾರ ಸಸ್ಪೆನ್ಸನ್ ರದ್ದು ಮಾಡಿರುವುದು ಒಳ್ಳೆಯ ಮುನ್ಸೂಚನೆ ಆಗಿದೆ.


ಪಂಚಮ

ಸಪುಟ : 7 ಸಂಚಿಕೆ 2 ಬೆಲೆ–50 ಪೈಸೆ ಫೆಬ್ರವರಿ 5, 1983

ದಲಿತ ನಿರ್ದೇಶಕ ಕೆಸ್ತೂರ್ ಬಸವರಾಜ್

ಇಂದಿನ ಆರ್ಥಿಕ ಸಂಪನ್ಮೂಲಗಳಲ್ಲಿ ಚಿತ್ರರಂಗವು ಒಂದಾಗಿದ್ದು ಇದು ಅಗತ್ಯವಾಗಿ ನಾಗರೀಕರ ಮೇಲೆ ಪ್ರಭಾವಬೀರಿದೆ. ಸಿನಿಮಾರಂಗವುಸಾಮಾನ್ಯವಾಗಿ ಸವರ್ಣೀಯರ ಕೈಹಿಡಿತದ ಗೊಂಬೆಯಾಗಿದೆ. ಒಂದು ವೇಳೆ ದಲಿತರೆನಿಸಿಕೊಂಡ ನಿರ್ದೇಶಕರು ಆಕಸ್ಮಿಕವಾಗಿ ಮರುಭೂಮಿಯಲ್ಲಿ ಕಂಡುಬರುವ ಓಯಸಿಸ್‌ಗಳಂತೆ ಅಲ್ಲಲ್ಲಿ ಕಾಣಿಸುತ್ತಾರೆ. ಅಂತಹರಲ್ಲಿ ಕೆಸ್ತೂರ್ ಬಸವರಾಜರು ಒಬ್ಬರು.

ಇಂತಹ ನಿರ್ದೇಶಕರು ಸಿಗುವುದು ಅಪರೂಪ. ಕಾರಣ ದಲಿತರಿಗೆ ಎಷ್ಟೇ ಉತ್ತಮವಾದ ಪ್ರತಿಭೆ ಇದ್ದರೂ ಮುಂದೆ ಬರುವುದಕ್ಕೆ ಸಾಧ್ಯವಾಗು ... ಇಂತಹ ಕಾರಣಗಳಿಂದಲೇ ದಲಿತ ನಿರ್ದೇಶ ... ಬೆಳಕಿಗೆ ಬಾರದೆ ಮೂಲೆಗುಂಪಾಗಿದ್ದಾರೆ. ... ಗೆಯೇ ಸಿನಿಮಾ ರಂಗವನ್ನು ಪರಿಶೀಲಿಸಿದಾಗ ಪ್ರತಿಭಾವಂತ ಕಲಾವಿದರಿಗೆ ಪ್ರೋತ್ಸಾಹ ನೀಡು



ಸಂದರ್ಶಕ : ಶಿವಣ್ಣ ಕಂದೇಗಾಲ

ವಲ್ಲಿ ಸರ್ಕಾರ ಮೋಸ ನಡೆಸುತ್ತಲೇ ಬಂದಿದೆ.

ಸತತವಾಗಿ 12 ವರ್ಷಗಳಿಂದಲು ಸಹ ನಿರ್ದೇಶಕ ರಾಗಿ, ಸಾಹಿತಿಯಾಗಿ, ನಿರ್ದೇಶಕ ಸ್ಥಾನ ಪಡೆದ ಕೆಸ್ತೂರರ ಅಭಿಪ್ರಾಯ ಇದು: ಅನಕ್ಷರತೆ, ಮೂಢ ನಂಬಿಕೆ, ಕಂದಾಚಾರವೇ ಮೊದಲಾದ ಅನಿಷ್ಟಕಾರಕ ವಾದ ಪಿಡುಗುನಿಂದ ಕೆಳವರ್ಗದ ಜನರನ್ನು ಬಿಡು ಗಡೆ ಮಾಡಬೇಕಾದರೆ ಕೇವಲ ಬರಹ ಅಷ್ಟು ಪರಿ ಣಾಮಕಾರಿಯಲ್ಲ. ಈ ಮೇಲಿನ ವಿಷಯಗಳಿಗೆ ಶೀಘ್ರ ಪರಿಣಾಮಕಾರಿ ಎಂದರೆ ಸಿನಿಮಾ ಮಾಧ್ಯಮ ಮಾತ್ರ. ಕಲೆ, ಸಾಹಿತ್ಯ, ಚಿತ್ರಜಗತ್ತು, ಯಾರೊಬ್ಬರ ಸ್ವತ್ತಲ್ಲ, ಇದರಲ್ಲಿ ಪ್ರತಿಯೊಬ್ಬರಿಗೂ ಸಮಾನ ಹಕ್ಕಿರು

(ಕೊನೆಯ ಪುಟಕ್ಕೆ)

ಅಸ್ಪೃಶ್ಯತೆಯ ನಿವಾರಣೆ ಒಂದು ಸಾಮಾಜಿಕ ಹೊಣೆ

- ದೈವ ಸೃಷ್ಟಿಯಲ್ಲಿ ಮಾನವರೆಲ್ಲ ಒಂದೇ. ಅಸ್ಪೃಶ್ಯತೆ ಎನ್ನುವುದು ಮಾನವತೆಗೇ ಕಳಂಕ ತರುವಂಥದು. ಇದು ಮಾನವರೇ ಸೃಷ್ಟಿಸಿಕೊಂಡ ಅಂತರ. ಈ ಸಾಮಾಜಿಕ ಪಿಡುಗನ್ನು ತೊಡೆದು ಹಾಕುವುದು ಇಡೀ ಸಮಾಜದ ಜವಾಬ್ದಾರಿ. ಇದನ್ನರಿತ ಸರ್ಕಾರ ಅಸ್ಪೃಶ್ಯತಾ ನಿವಾರಣೆಗೆ ಸತತವಾಗಿ ಶ್ರಮಿಸುತ್ತಿದೆ.

- ಹರಿಜನರಿಗೆ ಸಾರ್ವಜನಿಕ ಹೊಟೆಲ್ಲುಗಳಲ್ಲಿ ಊಟ ತಿಂಡಿ ನೀಡಲು ನಿರಾಕರಿಸುವುದು, ಜಾತಿಯ ಆಧಾರದ ಮೇಲೆ ನಿಂದಿಸುವುದು, ಸಾರ್ವಜನಿಕ ಬಾವಿಗಳಲ್ಲಿ ನೀರು ತರುವುದನ್ನು ತಡೆಯುವುದು, ದೇವಸ್ಥಾನಗಳಿಗೆ ಪ್ರವೇಶ ಪ್ರತಿಬಂಧಿಸುವುದು ಹಾಗೂ ಈ ವರ್ಗದ ಜನರನ್ನು ಕೆಲಸಕ್ಕೆ ನೇಮಿಸಿಕೊಳ್ಳಲು ನಿರಾಕರಿಸುವುದು—ಮುಂತಾದ ಸಮಾಜ ವಿರೋಧಿ ಕಾರ್ಯಗಳು ಅಪರಾಧವೆನಿಸುತ್ತವೆ. ಹಾಗೆ ಮಾಡುವವರು ಕಾನೂನಿನನ್ವಯ ಶಿಕ್ಷಾರ್ಹರು.

- ಇಂತಹ ಅವಹೇಳನಕ್ಕೆ ಒಳಗಾದ ವ್ಯಕ್ತಿಗಳು ಆ ಬಗ್ಗೆ ಸಮೀಪದ ಪೋಲೀಸ್ ಠಾಣೆಗೆ ದೂರು ನೀಡಬೇಕು. ಅಸ್ಪೃಶ್ಯತಾ ನಿವಾರಣೆಗೆ ನೆರವಾಗಬೇಕು.

ಪ್ರಕಟಣೆ : ವಾರ್ತಾ ಮತ್ತು ಪ್ರಚಾರ ಇಲಾಖೆ, ಕರ್ನಾಟಕ ಸರ್ಕಾರ
ಬೆಂಗಳೂರು

ತಲೆಮಾರಿಗೂ ಮುಗಿಯದ ಜೀತ

ದಲಿತರ ಬದುಕು ಜೀತಕ್ಕೆ ಮೀಸಲು ಸರ್ಕಾರ ಜೀತ ವಿಮುಕ್ತ ಕಾನೂನು ಮಾಡಿದ್ದರೂ ಅವರು ಜೀತ ಸಾಲ ಶೋಷಣೆಗಳಲ್ಲಿ ನರಳುತ್ತಿರುವರು.

29-11-82ರಂದು 70 ವರ್ಷದ ಮುದುಕನೊಬ್ಬನನ್ನು ಭೇಟಿ ಮಾಡಿದೆ. ಆತನ ಹೆಸರು ಬೋರಣ್ಣ. ತುಮಕೂರು ಜಿಲ್ಲಾ ಕೊರಟಗೆರೆ ತಾಲ್ಲೋಕು ಚಿಕ್ಕ ಸಂಜೀವ ಗೌಡನ ಪಾಳ್ಯ ಅಂತ ಗೊತ್ತಾಯಿತು. ನೀನು ತುಮಕೂರಿಗೆ ಏತಕ್ಕೆ ಬಂದೆ ಎಂದು ಕೇಳಿದೆ. ಸರ್ಕಾರ ಜೀತ ಇದ್ದೋರ್ಗೆ ಮನೆ ಕಟ್ಟಿ ಕೊಡ್ತಾರಂತೆ, ಎತ್ತು ಗಾಡಿ ಕೊಡ್ತಾರಂತೆ, ಐದು ಸಾವಿರ ಕೊಡ್ತಾರಂತೆ. ಅದಕ್ಕೆ ಅರ್ಜಿ ಹಾಕನಂತ ಬಂದೀದ್ದಿನಿ ಅಂದ.

ನೀವು ಯಾವಾಗ ಜೀತಕ್ಕಿದ್ದಿರಿ ? ಎಂದದ್ದಕ್ಕೆ ಆತ,ನನಗೆ ತಿಳಿಯದು ಸುಮಾರು ನಾನು ಹನ್ನೆರಡು ವರ್ಷದವನಿದ್ದಾಗ ನಮ್ಮ ಅಪ್ಪ ಮಗ್ಗಲೂರಿನ ತಿಮ್ಮೇಗೌಡನ ಮನೇಲಿ ಐವತ್ತು ರೂಪಾಯಿಗೆ ಸಾಲ ಮಾಡಿದ್ನಂತೆ, ಆದಕೆ ಅವರ ಮನೇಲಿ ಏಳು ವರ್ಷ ಕಾಲ ಜೀತ ಇಟ್ಟಿದ್ದ. ನನ್ಮದುವೆಗಂತ ನೂರು ರೂಪಾಯಿ ಸಾಲ ತಕ್ಕೊಂಡೆ ನಾನೀಗಾಗ್ಲೇ ಬಿಟ್ಟು ಎಳೆಂಟೊರ್ಷ ಆಯ್ತು, ಆಗ ನಿನಗೆಷ್ಟು ಸಂಬಳ ಕೊಡುತ್ತಿದ್ದರು ? ನನಿಗೆ ಹದಿನಾಲ್ಕು ರೂಪಾಯಿ ಕೊಡ್ತಿದ್ರು, ಮಗ್ಗಲೂರಿನ ತಿಮ್ಮೇಗೌಡನ ಮನೇಲೆ ನನ್ಮಗ ಸಿದ್ದಲಿಂಗು ಇದ್ದ. ಅವನ ಮದುವಿಗಂತ ಎಪ್ಪತ್ತು ರೂಪಾಯಿ ಸಾಲಮಾಡ್ದೆ ಆದರೆ ನನ್ಮಗ ಸಿದ್ದಲಿಂಗ ಆರುವರ್ಷ ಹನ್ನೊಂದು ತಿಂಗಳು ಜೀತ ಇದ್ದು ನಾನಿರದಿಲ್ಲ ಅಂತ ಮನಿಗೆ ಬಂದ. ನಾನು ಬರ್ಸಿ ಕೊಟ್ಟಿದ್ದ ಪತ್ರ ಕೇಳಿದೆ. ತಿಮ್ಮೆಗೌಡ ಕರಾರಿನಂತೆ ನಿನ್ಮಗ ಇನ್ನು ಒಂದು ತಿಂಗಳು ಇರ್ಬೆಕಾಗಿತ್ತು. ಮಧ್ಯೆ ಬಿಟ್ಟ ತಪ್ಪಿಗೆ ಬಡ್ಡಿನೂ ಸೇರಿ ಇನ್ನೂರೈವತ್ತು ರೂಪಾಯಿ ಕೊಟ್ಟು ಪತ್ರ ತಗೊಂಡೋಗು ಅಂದ. ಈಗ ಅವನ ಸಾಲ ತೀರ್ಸಿ ಋಣ ಮುಕ್ತನಾದೆ. 250 ರೂಪಾಯಿ ಎಲ್ಲಿಂದ ತಂದು ಕೊಟ್ಟೆ ? ನಮ್ಮನೆಲಿ ಸಾಕಿದ್ದ ಎತ್ತು, ಎಮ್ಮೆ ಮಾರಿ ಕೊಟ್ಟೇಂದೆ. ನೀನು ಒಟ್ಟು ಎಷ್ಟು ವರ್ಷ ಕಾಲ ಜೀತಕ್ಕಿದ್ದೆ ? ನಾನು ತಿಮ್ಮೆಗೌಡ್ನ ಕಾಲ್ದಾಗೆ ಸೇರಿದ್ದು, ಅವನಿಗೆ ಅಪ್ಪಾಜಪ್ಪಂತ ಒಬ್ಬ ಮಗ ಇದ್ದ. ಅವನಿಗೆ ಇಬ್ರು ಮಕ್ಕಳು, ಈರಣ್ಣ ಚಿಕ್ಕತಿಮ್ಮಯ್ಯಂತ ಅವರಿಬ್ರೂನುಈವಾಗಾಗ್ಲೆ ಇಬ್ಬಿಬ್ರು ಮಕ್ಕಳಿಗೆ ಮದುವೆ ಮಾಡವ್ರೆ ನಿಮ್ಮ ಯಜಮಾನ ನಿನ್ನ ಹೆಂಗೆ ನೋಡಿ ಕೊಳ್ತಿದ್ದ? ಆ ಕಥೆ ಬಿಡಿ ಸ್ವಾಮಿ, ಕತ್ತೆ ಬಾಳು ನಮ್ದು ನಮ್ಮ ಗೌಡ ನನ್ಮಾತಾಡ್ಸಕ್ಕೆ ಬಂದ ಅಂದ್ರೆ ಅವನ ಕೈಯ್ನಾಗೆ ದೊಣ್ಣೆ ಇದ್ದೆ ಇರುತಿತ್ತು. ಅವನ ಮಾತು ಮುಗಿಯುವಷ್ಟೊತ್ತಿಗೆ ಅವ್ನ ದೊಣ್ಣೆ ನನ್ನ ಬೆನ್ನಿಗೆ ಬಿದ್ದಿರೋದು ಇಂಥವು ಲೆಕ್ಕಿಲ್ಲ. ನೀನು ಜೀತಕ್ಕಿದ್ದಾಗ ಮರೆಯದಂಥ ಘಟನೆಗಳೇನಾದರು ನೆಡೆದಿದ್ವ ? 'ಒಂದ್ಸಾರಿ ಕಪಿಲೆ ಹೊಡಿತಿದ್ದೆ' ಎತ್ತುಗಳು ಸರಿಯಾಗಿ ಹೋಗ್ತಿರಲಿಲ್ಲ. ಹೊಂಗೆ ಕೋಲ್ನಾಗೆ ಎಳ್ದೇಟು ಹೊಡ್ದ ತಿಮ್ಮೇಗೌಡ್ರ ಮಗ ಅಪ್ಪಾಜಪ್ಪ ಬಂದು ಅದೇ ದೊಣ್ಣೆಗೆ ನನ್ನ ಸಾಯಂಗೊಡ್ದ. ಅರ್ಧ ಹೊತ್ತಿನಾಗ ಅವರಪ್ಪ ಬಂದು ಎಬ್ಬರ್ಸಿ ಕರಕೊಂಡೋದ. ಮೈಯ್ಯಾಗೆಲ್ಲ ಗಾಯಗಳಾಗಿ ಒಂದು ತಿಂಗ್ಳತನಕ ಸುಧಾರಿಸಿಕೊಂಡೆ. ಆ ತಿಂಗಳು ಉಳಿಯಾಳು ಬರ್ಕೊಂಡು ಒಂದುತಿಂಗಳು ಹೆಚ್ಚಿಗೆ ಗೆಯ್ಸಿಕೊಂಡ.

ಒಂದ್ಸಾರಿ ಖಾಯ್ಲೆ ಬಿದ್ದಿದ್ದೆ, ಆವಾಗ ನಮ್ಮನೇಲೆ ಇದ್ದೆ, ತಿಮ್ಮೆಗೌಡ ಬಂದು ಯಾಕ ಕೆಲ್ಸಕ್ಕೆ ಬರಲಿಲ್ಲ ಅಂತ ಕೇಳ್ದ ಮೈಯಾಗೆ ಉಶಾರಿಲ್ಲ ಅಂದ, ಅದಕ್ಕೆ ಉಶಾರಿಲ್ದಿದ್ರೆ ನಮ್ಮನೆ ಅತ್ರ ಬಿದ್ದಿರಬೇಕು ನಾನು ಕಾಸು ಕೊಟ್ಟಿದ್ದೀನಿ ನಿನ್ನ ಖಂಡ ತಕ್ಕೊಂಡೆ ಬಿಡೋದು ಅಂದ. ಖಾಯ್ಲೆ ಜಾಸ್ತಿ ಇದ್ದಿದ್ರಿಂದ ನನ್ನೆಂಡ್ತೀನೆ ಕೆಲ್ಸಕ್ಕೋದ್ಲು ನಿನಗೆ ಹೊಟ್ಟೆ ತುಂಬಾ ಊಟ ಹಾಕುತ್ತಿದ್ದರೆ ? ಹಾಕುತಿದ್ರು ಅವರ ಮನ್ಸಿಗೆ ಬಂದಾಗ ಇಳ್ಳು ಸರ್ವತ್ನಾಗಹಗಲುಮದ್ದ್ಯಾಣದ್ಹಾಗನಿನಗೆಯಾವಜಾಗದಲ್ಲಿ ಊಟ ಹಾಕುತ್ತಿದ್ರು? ದನಿನ ಕೊಟ್ಕೆ. ಅಲ್ಲೊಂದು ಗೂಡು ಇತ್ತು. ಅದರಾಗೆ ಒಂದು ಮಣ್ಣಿ[illegible] ಗಾಜಿನ ತಟ್ಟೆ ಇಟ್ಕೊಂಡಿದ್ದೆ. ಗಾಜಿ[illegible] ಅಂದ್ರೆ ಸಾಬ್ರು ಇಟ್ಕೊತರೆ ನೋಡ್ರಿ ಅ[illegible]

ಸರ್ಕಾರದಿಂದ ನಿನಿಗೇನಾದ್ರು ಪರಿಹಾ[illegible]ದ್ದೀಯಾ ? ಏನು ಇಲ್ಲ ಸ್ವಾಮಿ, 75[illegible] ಇಸವಿಯಲ್ಲಿ ಸರ್ಕಾರ ಜೀತವಿಮುಕ್ತಿ [illegible] ತಂದಿತ್ತು, ಆಗ ನಿಮ್ಮೂರಿನ ಛೇರ್ಮನ್ ಯಾರು ನಿನಗೆ ಅರ್ಜಿ ಹಾಕಕೆಹೇಳ್ಲಿಲ್ವ? ಇಂತದ್ನೆಲ್ಲ ಮಾಡ್ತಾರ ಸ್ವಾಮಿ ಅಂತ ಹೇ[illegible]ವಾಗಿ ಕುಳಿತ ಮುದುಕ ಭೋರಣ್ಣನ ಮುಖ ನನ್ನ ಕಣ್ಣು ಕಟ್ಟಿತು. ಅದರ[illegible] ಕೋಟಿ ಕೋಟಿ ಭೋರಣ್ಣನ ದೇಹಗ[illegible] ಮಾಂಸವಿಲ್ಲದೆ ಮೂಳೆ ಬಿಟ್ಟಿಕೊಂಡು ನಿ[illegible] ಭೋರಣ್ಣ 20ವರ್ಷದ ಹರೆಯದವನಾ[illegible] ತುಂಬು ಗೆನ್ನೆಗಳು ಪರಟಾಗಿ ಬೆಳೆದಿದ್ದ[illegible] ಖಂಡ ಇಡೀ ಜೀವಮಾನವನ್ನೆ ಕತ್ತೆಯಂ[illegible]ಕೊಂಡು ಮೂಳೆ ಚಕ್ಕಳ ಮಾಡಿದ ತಿಮ[illegible] ಮನೆತನದ ರಾಕ್ಷಸಿತನ ಕಣ್ಣುಮುಂದೆ[illegible] ಇವರಿಬ್ಬರ ನಡುವೆ ಇಂಡಿಯಾಕ್ಕೆ ಬಂದಸ[illegible] ಬಡವರ ಪಾಲಿಗೆ ಗಗನ ಕುಸುಮ[illegible] ಮುವತ್ತೈದು ವರ್ಷದ ಕಾಂಗ್ರಸ್ಸಿನ ಸರ್ಕಾರದ ಜೀತ ವಿಮುಕ್ತ ಕಾನೂನನ್ನು ಹಾಕಿದ ಗ್ರಾಮ ಪಂಚಾಯ್ತಿಗಳು ನಿಂತವೆ.

-ನಾಗರಾಜು, ಬಂದ[illegible]

ವಸ್ತುಸ್ಥಿತಿ

(ಮೊದಲನೆ ಪುಟದಿಂದ)

ವಂತಹುದು ಎನ್ನುವ ಕೆಸ್ತೂರ್‌ರವರು ಆನೇಕ ಹೊಸ ಮುಖಗಳನ್ನು ತೆರೆಯ ಮೇಲೆ ತಂದಿದ್ದಾರೆ.

ನನ್ನ ಚಿತ್ರಗಳಲ್ಲಿ ಪ್ರತಿಯೊಬ್ಬರಿಗೂ ಅವಕಾಶ ನೀಡಿದ್ದೇನೆ. ಇತರ ನಿರ್ದೇಶಕರಾಗಲಿ, ನಿರ್ಮಾಪಕರಾಗಲಿ, ನನ್ನ ಚಿತ್ರಕ್ಕೆ ಕಿಂಚಿತ್ತೂ ಬೆಂಬಲನೀಡುವುದಿಲ್ಲ . ಕಾರಣ ಕೀಳುಜಾತಿ ನಿರ್ದೇಶಕ.

ಆದ್ದರಿಂದಲೇ ನನ್ನ ಎಷ್ಟೊ ಚಿತ್ರಗಳು ಇಂದು ಅಪೂರ್ಣವಾಗಿ ಉಳಿಯಬೇಕಾಗಿದೆ. ನನ್ನ ಹನ್ನೆರಡು ವರ್ಷದ ಅನುಭವದಲ್ಲಿ ಕೆಲವು ಮಾನಸಿಕ ತುಳಿತಕ್ಕೆ ಬಲಿಯಾಗಿದ್ದೇನೆ. ಉದಾ ಎಷ್ಟೋ ಸಾರಿ ನಿರ್ಮಾಪಕರು ನಟನಟಿಯರು ನನ್ನ ಚಿತ್ರದಲ್ಲಿ ಅಭಿನಯಿಸುತ್ತೇವೆಂದು ಭರವಸೆ ನೀಡಿ ಮೋಸ ಮಾಡಿದ್ದು, ಅವರಿಗೆಲ್ಲಾ ನನ್ನ ಜಾತಿ ಅರಿವಾದಾಗ.

ಕೆಸ್ತೂರವರು ಇದುವರವಿಗೂ 45ಕೊ[illegible] ಕಥೆ, ಕವನಗಳನ್ನು ಮತ್ತು ಕಾದಂಬರಿಗಳ[illegible]ಸಿದ್ದಾರೆ. ಇವಲ್ಲದೆ ಕೆಲವು ಚಲಚ್ಚಿತ್ರ[illegible] ತಯಾರಿಸಿದ್ದು ಮುಖ್ಯವಾಗಿ ಸಂಘರ್ಷ, ಸ[illegible] ಸ್ವಾಮಿಜಿ. ಇನ್ನೂ ಇತರೆ ಚಿತ್ರಗಳು[illegible] ನಿರ್ದೇಶನದಲ್ಲಿ ತಯಾರಾಗಿವೆ.

ಆದರೆ ನನಗೆ ಗಳಿಸೋ ಬಯಕೆಯಿಲ್ಲ ಇವರು ಬದಲಾಗಿ ನನ್ನ ಮುಖ್ಯಉದ್ದೇಶದಲ್ಲಿ ಕಾಡುತ್ತಿರುವ ಅಜ್ಞಾನ. ಭೇದಭಾವ, ನಂಬಿಕೆ ಎಂಬ ಸೊಂಕನ್ನು ತೊಡೆದು ಹಾ[illegible]ವುದೆ ಆಗಿದೆ ಎಂದಿದ್ದಾರೆ. ಸ್ವ[illegible] ಚಿತ್ರಗಳನ್ನು ತಯಾರಿಸಬೇಕೆಂಬ ಆಶೆ[illegible] ಹಲವಾರು ಎಡರುತೊಡರುಗಳಿಗೆ ಹೆದರದೆ[illegible]ವಾಗಿ ನಿರ್ದೇಶನ ಕ್ಷೇತ್ರದಲ್ಲಿ ನಿಂತಿರುವ [illegible] ದಿಗ್ದರ್ಶಕ ಕೆಸ್ತೂರ್ ಬಸವರಾಜರವರು.

ಸಂಪಾದಕ,ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರಿ 2514, ಕೆ. ಜಿ. ಕೊಪ್ಪಲು, ಮೈಸೂರು-14.

ಅನುಭವದ ಗಣಿಯಿಂದ

ಕೆಂಡವಾದವರು

ನಾನು ಎರಡನೇ ಬಿ.ಎ. ಕೋಲಾರ ಕಾಲೇ ೋದುತ್ತಿದ್ದೆ. ಸಾಮಾಜಿಕ, ಆರ್ಥಿಕ, ರಾಜ ಮತ್ತು ಸಾಂಸ್ಕೃತಿಕ ವಿಷಯಗಳ ಕಡೆ ಗಮನ ವುದೆಂದು, ಹಾಗು ಡಿಪ್ಲೊಮೋ ಕೋರ್ಸ್ ವೆಂದು ಉಪನ್ಯಾಸಕರುತಿಳಿಸಿದರಿಂದ ಎ ಎಸ್. ಗೆ ಸೇರಿದೆ. ನಮ್ಮನ್ನು ವಾರಕ್ಕೆ ಡು ಸಲ ಕಾಲೇಜಿನ ಗೋಡೆಯ ಅಶ್ಲೀಲ ಚುನಾವಣೆಯ ಬರಹಗಳನ್ನು ಅಳಿಸಲಿಕ್ಕೆ, ತೆಗೆದು ಸ್ವಚ್ಛ ಮಾಡಲಿಕ್ಕೆ. ಕೋಲಾರದ ಸಮೀಪವಿರುವ ಹಳ್ಳಿಗಳ ಚರಂಡಿ, ರೋಡು, ಗೋ, ಆಸ್ಪತ್ರೆಯ ಒಳ ಗಲೀಜು ತೆಗೆಯ ಕರೆಸಿಕೊಂಡು ತಿಂಡಿ, ಊಟ ಕೊಡುತ್ತಿದ್ದರು ರ್ಷದಂತೆ ಈ ಸಲ ಎನ್. ಎಸ್. ಎಸ್ ಕ್ಯಾಂ ಕೋಲಾರಕ್ಕೆ ಮೂರು ಮೈಲಿ ದೂರದ ಹಸಾಳಕ್ಕೆ ಹಾಕಿಕೊಂಡರು. ನಾನು ದೊಡ್ಡ ೇಕ್ಕೆ ಕ್ಯಾಂಪಿನಲ್ಲಿ ಸಕ್ರಿಯವಾಗಿ ಭಾಗವಹಿ ಹೋದೆ. ಕ್ಯಾಂಪಿನ ಅವಧಿ ಹತ್ತು ದಿನ .

ೊಡ್ಡಹಸಾಳಕ್ಕೆ ಕಾಲಿಡುತ್ತಲೇ, ಊರಿನ ಕಡೆ ಓಡಾಡಿದೆ. ಹಳ್ಳಿಯ ಸ್ಥಿತಿಗತಿಗಳ ಆಲಿ ಹಳ್ಳಿಯವರ ಜೊತೆ ಮುಖಾಮುಖಿಯಾಗಿ ಿಲ್ಲದ ಸಮಯದಲ್ಲಿ ಚರ್ಚಿಸಿದೆ. ಆ ರೀತಿ ಸುವಾಗ ಶ್ರೀಮಂತ, ಬಡವರ ಸ್ಥಿತಿಗತಿ, ಗೌಡ ಲರ ಹಿಡಿತ, ಹರಿಜನರ ಯೋಗಕ್ಷೇಮ ಮುಂತಾದ ವಿಷಯಗಳ ಬಗ್ಗೆ ರಾತ್ರಿ ವೇಳೆ 'ಕೋಟಿ ಚರ್ಚಿಸಿದೆ ಕೋಟಿ ಬಾದೆಗಳಲ್ಲಿ ಲಕ್ಷಾಂತರ ನೋವುಗಳಲ್ಲಿ ನೀ ಹುಟ್ಟಿ ಬೆಳೆದೆಯಮ್ಮ ನನ್ನ ತಂಗಿ ಅನಸೂಯ' ಎಂಬ ಹಾಡು ಹೇಳಿದಾಗ, ಹಳ್ಳಿಯ ಹೆಂಗಸರ ಕಣ್ಣುಗಳು ಒದ್ದೆಯಾಗಿ, ಆ ಹಾಡನ್ನು ಕಲಿಯಲು ಪ್ರಯತ್ನಿಸುತ್ತಿದ್ದರು. ಕ್ಯಾಂಪಿನಲ್ಲಿ ಪೂರ್ಣವಾಗಿ ಭಾಗವಹಿಸಿದಕ್ಕೆ ನಮ್ಮ ಉಪಾಧ್ಯಾಯರಿಂದ 'ನೀವು ಕೊನೆಯ ದಿನ ಪ್ರಬಂಧ ಒಂದನ್ನು ತಯಾರಿಸಿ ಈ ಊರಿನ ಬಗ್ಗೆ'' ಎಂದು ತಿಳಿಸಿದರು.(ಅದೇ ರೀತಿ ಹಳ್ಳಿಯ ಒಟ್ಟಾರೆ ಚಿತ್ರಣವನ್ನು ಪ್ರಬಂಧದ ರೂಪದಲ್ಲಿ ಕೆತ್ತಿಟ್ಟೆ.)

ಕೊನೆಯ ದಿನ ನಮಗೆಲ್ಲ ಕೆಲಸಕ್ಕೆ ಬಿಡುವು. ಸುಮಾರು ಒಂಬತ್ತು ಗಂಟೆ ಬೆಳಿಗ್ಗೆ ಊರಿನ ಸ್ಕೂಲಿನ ಮುಂದೆ ಮುಕ್ತಾಯ ಸಮಾರಂಭ ರೆಡಿಯಾಯಿತು. ಮುಖ್ಯ ಅತಿಥಿಗಳು ಬಂದಿದ್ದರು. ನನ್ನ ಸರದಿ ಬರುತ್ತಲೇ ವೇದಿಕೆಯ ಮೇಲೆ ಹೋಗಿ ಪ್ರಬಂಧವನ್ನು ಓದತೊಡಗಿದೆ. ಊರಿನ ಹರಿಜನರ ಸ್ಥಿತಿಗತಿ, ದೇವಾಲಯ ಪ್ರವೇಶ, ಬಾವಿಕುಂಟೆಗಳಲ್ಲಿ ನೀರು ತರುವಿಕೆ ನಿಷೇಧ, ಇನಾಂತಿ ಜಮೀನು ಕಳೆಕೊಂಡ ಸ್ಥಿತಿ, ಸೈಟಿಲ್ಲದೆ, ಮನೆ ಇಲ್ಲದೆ ಇರುವ ಪರಿಸ್ಥಿತಿಯನ್ನು... ... ಬಿತ್ತರಿಸುತ್ತಿದ್ದಂತೆ ಸಭೆಯಲ್ಲಿ ಹಳ್ಳಿಯ ಜನರ ಜೊತೆ ಕುಳಿತ್ತಿದ್ದ, ಪದವೀಧರ ಎನ್. ಎಸ್. ಎಸ್ ಕಾರ್ಯಕರ್ತರು ಕೂಗಾಡತೊಡಗಿದರು. "ನಿಮ್ಮ ಭಾಷಣ ಸಾಕು ನಿಲ್ಲಿಸಿ' ನಿಮಗೆ ಇನ್ನೇನು ಕೆಲಸವಿಲ್ಲವೇ?"... ಮುಂತಾದ ಗಲಾಟೆಗದ್ದಲ ಸಭೆಯಲ್ಲಿ ಮುಗಿಲು ಮುಟ್ಟಿತು. ಊರಿನ ಇತರ ಬಡವರನ್ನು ಮನೆಇಲ್ಲದೆ, ಜಮೀನಿಲ್ಲದೆ ಇರುವ ಪರಿಸ್ಥಿತಿ ವಿವರಿಸಿದಾಗ ಸುಮ್ಮನಿದ್ದ ಇವರು ಹರಿಜನರ ಪ್ರಶ್ನೆ ಬಂದಾಗ ಕೆಂಡವಾದರು, ಕೈ ಕೈಮಿಲಾಯಿಸುವ ಸ್ಥಿತಿಗೆ ಬರುತ್ತಿತೇನೋ, ಉಪಧ್ಯಾಯರ ಮಧ್ಯವರ್ತಿಯಿಂದ ನನ್ನ ಭಾಷಣ ಗಲಾಟೆಯಲ್ಲಿ ಮುಂದುವರೆಯಿತು. ಅದೇ ಊರಿನ ಪದವೀಧರ ದಲಿತ ಎಂ. ಈರಪ್ಪ ನನ್ನ ಸಮಾಧಾನಪಡಿಸಿದ. ಅಸ್ಪೃಶ್ಯತೆಯ ಅಂತರಾಳ ಹಳ್ಳಿಯವರಿಗಿಂತ ಓದಿದವರಲ್ಲೆ ನನಗೆ ಹೆಚ್ಚು ಕಂಡಿತು. ಆಗ ನನ್ನ ಭಾವನೆಗಳೆವೂ ಬೆಂಕಿಯಾದವು.

ಹೆಚ್. ರಾಮಕೃಷ್ಣ

(4ನೇ ಪುಟದಿಂದ)

ಚೆನ್ನಾಗಿ ನೆನಪಿದೆ; ಬನಾರಸ್. ಅಲಹಾಬಾ ಹಿಂದೂ ಸಂಪ್ರದಾಯವಾದಿಗಳು, ಅಂಬೇ ಅವರು ಮನುವಿನ ಜಾಗದಲ್ಲಿ ಸೇರುವುದನ್ನು ೇಚಿಸಲೂ ಭಯಪಟ್ಟಿದ್ದರು. ಅಂಬೇಡ್ಕರ್ ಗೆ ಸಂವಿಧಾನಕ್ಕಿಂತಲೂ ಹಿಂದೂ ಶಾಸನ ೊದೆ ಅತಿಮುಖ್ಯವಾಗಿತ್ತು. ಅದು ಹಿಂದೂ ಜವನ್ನು ಕ್ರಾಂತಿಯತ್ತ ಕೊಂಡೊಯ್ಯುವುದಾ .

್ರಶ್ನೆ : ಕಾಂಗ್ರೆಸ್ ಸರಕಾರವು ಅಂಬೇಡ್ಕರ್ ಗೆ ನೀಡಬೇಕಾದ ಗೌರವವನ್ನು ನೀಡಿಲ್ಲ ಅಂತ ುತ್ತೀರಲ್ಲ ಯಾಕೆ?

ುತ್ತರ; ನೀವು ಈ ಪ್ರಶ್ನೆಯನ್ನು ಕೇಂದ್ರದ ಂಕಿಯಲ್ಲೇ ಕೇಳಬೇಕು.

್ರಶ್ನೆ : ಈ ತಿರಸ್ಕಾರದ ಬಗ್ಗೆ ನಿಮಗೆ ಏನನ್ನಿ ದೆ ?

ುತ್ತರ : ಇದು ಮತ್ತೆ ಜಾತಿ ವ್ಯವಹಾರದ್ದೇ . ಆ ಜನಕ್ಕೆ ಇವರನ್ನು ಮೇಲೆ ಕೂಡಿಸಲು ಬೇಕಿಲ್ಲವಾಗಿದೆ. ಈ ಕುರಿತೂ ನಾನು ಹೋರಾಡುತ್ತಲೇ ಇದ್ದೇನೆ. ನಾನು ಅವರಿಗೆ ಹೇಳಿದ್ದೇನೆ : ಗಾಂಧಿಯವರಿಗೆಂದು ನೀವು ದೆಹಲಿಯಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಿದ್ದೀರಿ ; ಕೋಟ್ಯಾಂತರ ರೂ. ಗಳ ವೆಚ್ಚದಲ್ಲಿ. ಹಾಗೇ ನೆಹರೂರವರಿಗೂ ಸಹ. ಹಾಗೇ ಅಂಬೇಡ್ಯರ್‌ರವರಿಗೂ ಯಾಕೆ ಗೌರವ ನೀಡಬಾರದು ಎಂದು ಪ್ರಶ್ನಿಸಿದಾಗ ಅವರಲ್ಲಿ ಉತ್ತರವೇ ಇರುವುದಿಲ್ಲ. ಯಾಕೆ ಗೊತ್ತಾ ? ಅಂಬೇಡ್ಕರ್ ಅತ್ಯಂತ ಕೆಳವರ್ಗದಿಂದ ಬಂದವರು ಎಂಬ ಒಂದೇ ಒಂದು ಕಾರಣ. ಹಾಗೇನಾದರೂ ಮಾಡಿದ್ದೇ ಆದರೆ ದಲಿತಜನ ಗಾಂಧಿ, ನೆಹರೂ ಅವರನ್ನು ಆರಾಧಿಸುವುದನ್ನು ಬಿಟ್ಟು ಅಂಬೇಡ್ಕರ್ ಅವರನ್ನೇ ಆರಾಧಿಸುತ್ತಾರೆಂಬ ಯೋಚನೆ ಅವರದು, ಆ ಸಂಜಯ ಗಾಂಧಿಯಾದರೂ ಯಾರು ? ನೆಹರೂ ಅವರ ಪಕ್ಕದಲ್ಲೇ ಅತನ ಸ್ಮಾರಕವನ್ನೂ ನಿರ್ಮಿಸಲಾಗಿದೆ. ಅಂಬೇಡ್ಕರ್ ಅವರು ಸಂಜಯ ಗಾಂಧಿಗಿಂತಾ ಚಿಕ್ಕವರು ಅಂಥ ನೀವು ಭಾವಿಸುತ್ತೀರಾ?

ಪ್ರಶ್ನೆ : ದಲಿತ ಪ್ಯಾಂಥರ್ಸ್‌ನ ಕೆಲವರು ಅಂಬೇಡ್ಕರ್ ಅವರ ಯೋಚನೆಯಾಗಿದ್ದ ಪ್ರತ್ಯೇಕ ದಲಿತ ಸ್ಥಾನ' ವಾದವನ್ನು ಮತ್ತೆ ಮುಂದಿಡುತ್ತಿರುವುದರ ಕಾರಣ ಪ್ರತ್ಯೇಕ 'ದಲಿತಸ್ಥಾನ' ದಿಂದ ಮಾತ್ರವೇ ದಲಿತರಿಗೆ... ....

ಉತ್ತರ : ಇಲ್ಲ, ಇಲ್ಲ. ಅದು ತಪ್ಪು ಕಲ್ಪನೆ. ಡಾ॥ ಅಂಬೇಡ್ಕರ್‌ಅವರು ಎಂದೂ ಪ್ರತ್ಯೇಕ 'ದಲಿತಸ್ಥಾನ' ವಾದವನ್ನು ಮಂಡಿಸಿರಲೇ ಇಲ್ಲ. ಅಂಥ ಬಾಲಿಶ ಮಾತುಗಳನ್ನಾಡುವುದರಲ್ಲಿ ಅವರು ಕೊನೆಯ ವ್ಯಕ್ತಿ. ಮತ್ತು ಅವರು ಯಾವುದೇ ರಾಷ್ಟ್ರ ವಿರೋಧಿ ಕುರಿತು ಮಾತನಾಡುವುದರಲ್ಲೂ ಕೊನೇ ವ್ಯಕ್ತಿಯಾಗಿದ್ದರು, 'ದಲಿತ ಸ್ಥಾನ' ಎಂದೂ ಅಂಬೇಡ್ಕರ್ ಅವರ ಯೋಚನೆ-ಆಗಿರಲೇ ಅಲ್ಲ, ಈ ಬಗ್ಗೆ ಯಾರು ಮಾತನಾಡಿದರೂ ಅವರು ತಲೆಯಲ್ಲಿ ಇಟ್ಟುಕೊಂಡು ಮಾತನಾಡುವುದು ಒಳ್ಳೆಯದು.

ಪ್ರಶ್ನೆ : ವಿಶೇಷ ಮೀಸಲಾತಿಗಳನ್ನು ಹತ್ತು ವರ್ಷಗಳನಂತರ ನಿಷೇದಿಸಬೇಕೆಂದು ಡಾ॥ ಅಂಬೇಡ್ಕರ್ ಬಯಸಿದ್ದರು. ಆದರೆ ಸರ್ಕಾರದವರು

ಮು

ಡಾ॥ ಸವಿತಾ ಅಂಬೇಡ್ಕರ್ ವಿಚಾರಧಾರೆ

(5ನೇ ಪುಟದಿಂದ)

ಪದೇ ಪದೇ ಅದನ್ನು ಮುಂದುವರಿಸುತ್ತಲೇ ಇದ್ದಾರೆ. ಮೀಸಲಾತಿಯ ಅವಶ್ಯಕತೆ ಈಗಲೂ ಇದೆಯೆಂದು ನಿಮಗನ್ನಿಸುತ್ತದೆಯೆ ?

ಉತ್ತರ : ಯಾರು ಹೇಳಿದರು ಮುಂದುವರೆಸಲೆಂದು. ನಾವಲ್ಲ. ಮುಂದುವರೆಸಿ ಅಂತ ನಾವೇನೂ ಕೇಳಲಿಲ್ಲ. ಇದು ಆಡಳಿತ ಪಕ್ಷದವರದ್ದು. ಯಾಕೆಂದರೆ ಅವರಿಗೆ ನಮ್ಮ ಮತಗಳು ಬೇಕಾಗಿವೆ ಎಲ್ಲ ಕಾಲಕ್ಕೂ, ಎರಡು ರೀತಿಯಲ್ಲಿ ನಮ್ಮನ್ನು ವಿಭಾಗಿಸಲಾಗಿದೆ. ಶಿಕ್ಷಣ ಮತ್ತು ಕೆಲಸ ಹಾಗೂ ರಾಜಕೀಯ ಮೀಸಲಾತಿ. ರಾಜಕೀಯ ಮೀಸಲಾತಿಯ ಬಗ್ಗೆ ನಾವು ಸಂಪೂರ್ಣ ವಿರೋಧವಿದ್ದೇವೆ. ಕಾಂಗ್ರೆಸ್ ಶಕ್ತಿ ಮುಂದುವರೆಯಲು ಸಾಧ್ಯವಾಗಿರುವುದು ಮೀಸಲಾತಿಯಿಂದಲೇ. ಸಂಸತ್ತಿನಲ್ಲಿ 100 ಹರಿಜನರಿದ್ದಾರೆ. ಅವರು ಅಲ್ಲಿ ಇಲ್ಲ ಅಂತಾದರೆ ಶ್ರೀಮತಿ ಇಂದಿರಾಗಾಂಧಿ ನಾಳೆಯೇ ಕುರ್ಚಿ ಬಿಟ್ಟು ಇಳಿಯಬೇಕಾಗುತ್ತದೆ. ರಾಜಕೀಯ ಮೀಸಲಾತಿ ಎಲ್ಲವನ್ನೂ ಹಾಳುಮಾಡಿದೆ ಅಲ್ಲದೆ ನಮ್ಮನ್ನು ಸರಿಯಾಗಿ ನೋಡಿಕೊಳ್ಳುತ್ತಲೂ ಇಲ್ಲ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿ 35ವರ್ಷಗಳಾಗಿವೆ—ಈಗ ನಮಗೆ ಚಮಚದಲ್ಲಿ ತಿನ್ನಿಸಬೇಕಾದ ಆವ್ಯಶಕತೆಯೇನೂ ಇಲ್ಲ.

ಪ್ರಶ್ನೆ : ವಿಧಾನಸಭೆಗೆ ಆರಿಸಿ ಬರಲು ದಲಿತ ಪ್ಯಾಂಥರ್ಸ್ ಯಾಕೆ ಪ್ರಯತ್ನಿಸಿಲ್ಲ ?

ಉತ್ತರ : ನಮ್ಮ ಈವರೆಗಿನ ಪ್ರಯತ್ನ ದಲಿತರ ಸಮಾಜ ಕಲ್ಯಾಣಕ್ಕೆ ಗಮನ ಕೊಡುವುದೇ ಆಗಿತ್ತು. ನಮ್ಮವೇ ಆದ ಶಕ್ತಿಯ ಮೇಲೆ ಸಂಸತ್ತಿಗೆ ಹಾಗೂ ವಿಧಾನಸಭೆಗಳಿಗೆ ಹೋಗಬಹುದಾದ ರಂಗವೊಂದು ಮುಂದೆ ಸಂಭವಿಸಲಿದೆ. ಈ ಸಧ್ಯಕ್ಕೆ ಆ ಬಗ್ಗೆ ನಾವೇನೂ ಗಮನ ನೀಡಿಲ್ಲ.

ಪ್ರಶ್ನೆ : 1084ರಲ್ಲಿ ಇದು ಸಾಧ್ಯವಾಗಬಹುದೇ ?

ಉತ್ತರ ; ನಾನು ನಿಮಗೆ ಅದನ್ನು ಹೇಳಲು ಸಾಧ್ಯವಿದೆ. ಆದರೆ ನನಗನ್ನಿಸುತ್ತೆ ಸರಿಯಾದ ಪ್ರತಿನಿಧಿಗಳು ಇದ್ದರೆ ಇಂಥ ಅವಘಡಗಳು ಸಂಭವಿಸಲಾರವು ಅಂತ.

ಪ್ರಶ್ನೆ : ಸಾಂಪ್ರದಾಯಿಕ ಹಿಂದೂ ಸಂಸ್ಥೆಗಳು ಈಗ ಮತ್ತೆ ಚಟುವಟಿಕೆಯಿಂದ ಕೂಡಿದ್ದು ತಮ್ಮ ಪ್ರಭಾವವನ್ನು ದೇಶದಲ್ಲಿಹರಡತೊಡಗಿದವು. ಭಾರತೀಯ ಜನತಾ ಪಾರ್ಟಿಯಂಥ ರಾಜಕೀಯ ಪಕ್ಷಗಳು ಶಕ್ತಿಯುತವಾಗತೊಡಗಿವೆ. ದಲಿತ ಸಂಸ್ಥೆ ಇವು ಸವಾಲು ಆಗಬಹುದೆಂದು ನೀವು ಭಾವಿಸುತ್ತೀರಾ ?

ಉತ್ತರ : ಸವಾಲ್ ಇದೆ ಅಂತ ನನಗನ್ನಿಸುವುದಿಲ್ಲ. ಏನೇ ಆದರೂ ಬಿಜೆಪಿ ನಮ್ಮೊಂದಿಗೆ ಕೈ ಕುಲುಕುತ್ತಿದೆ ತಾವು ದೊಡ್ಡವರೆಂಬ ಭ್ರಮೆಯಲ್ಲಿ. ನಾವು ಅರ್ಥ ಮಾಡಿಕೊಂಡಿದ್ದೇವೆ ಬಿಜೆಪಿಯ ಹೃದಯವೂ ಪರಿವರ್ತನೆಯೊಳ್ಳುವುದಿಲ್ಲವೆಂದು. **ಮತಗಳಿಗಾಗಿ ಅವರು ನಮ್ಮಲ್ಲಿ ಒಬ್ಬರು ಎನ್ನುವ ರೀತಿಯಲ್ಲಿ ನಟಿಸಿದ್ದಾರೆ.**

ಆದರೆ ವಿಶ್ವ ಹಿಂದೂ ಪರಿಷತ್ ನಿಜಕ್ಕೂ ನಮಗೆ ಸವಾಲಾಗಿದೆ. ನಾವು ಅದರ ವಿರುದ್ಧ ಹೋರಾಡುತ್ತೇವೆ. ನಾವು ಬೌದ್ಧ ಮತೀಯರು ಹಿಂದೂ ಪರಿಷತ್‌ನವರು ಮತ್ತೆ ಮನುವಿನ ಶಕ್ತಿಯನ್ನು ಪುನರ್ ಸ್ಥಾಪಿಸಲು ಹೊರಟಿದ್ದಾರೆ—ಮುಸ್ಲಿಮರನ್ನು ಮತಾಂತರಗೊಳಿಸುವುದರ ಮೂಲಕ, ನಮಗೆ ಇರುವ ತೊಂದರೆಗಳು ಅಂದರೆ ಮನುವಿನ 'ಚತುರ್ವರ್ಣ' ಸಿದ್ಧಾಂತ. ನಾವು ಅದನ್ನು ನಾಶಗೊಳಿಸಬೇಕೆಂದು ಇದ್ದೇವೆ. ಈ ಕಾರಣಕ್ಕಾಗಿಯೇ ನಾವು ಬೌದ್ಧಮತಕ್ಕೆ ಮತಾಂತರಗೊಂಡಿದ್ದು. ಆದರೆ ಅವರು ಮತಾಂತರಗೊಂಡವರನ್ನು ಹಿಂದೂ ಮತಕ್ಕೆ ವಾಪಸ್ಸು ಕರೆತರುವ ಮೂಲಕ ಮನು ಶಾಸನವನ್ನು ಮತ್ತೆ ಸ್ಥಾಪಿಸಲು ಹೊರಟಿದ್ದಾರೆ

ಆದರೆ ಅವರಾಗಲೇ ಸಮಸ್ಯೆಗಳನ್ನು ಮೈಮೇಲೆ ಚೆಲ್ಲಿಕೊಂಡಿದ್ದಾರೆ. ಮತಾಂತರಗೊಂಡವರನ್ನು ಹಿಂದೂಗಳು ಸ್ವೀಕರಿಸುವುದಿಲ್ಲ. ವಿವಾಹ ಸಮಸೆ ತೀವ್ರವಾಗಿ ಉದ್ಭವಿಸುತ್ತದೆ, ಒಬ್ಬ ಮುಸ್ಲಿಂ ತರುಣಿ ಹಿಂದೂವಾಗಿ ಮತಾಂತರಗೊಂಡಳೆಂದು ಕೇಳಿದ್ದೇನೆ. ಆಕೆ ವಿವಾಹವಾಗಬೇಕೆಂದು ಬಯಸಿದಾಗ ವಿಶ್ವ ಹಿಂದೂ ಪರಿಷತ್‌ಗೆ ಒಬ್ಬ ವರನನ್ನು ಪತ್ತೆಮಾಡಲು ಸಾಧ್ಯವಾಗಲಿಲ್ಲ. ಮತಾಂತರದಿಂದಾಗಿ ಐದನೇ ವರ್ಗವೊಂದು ಸೃಷ್ಟಿಗೊಂಡಿದೆ. ಅವರಿಗೆ ಬ್ರಾಹ್ಮಣ ಕ್ಷತ್ರಿಯರಂತೆ ಯಾವುದೇ ಒಂದು ಜಾತಿ ಪಟ್ಟಿಯನ್ನು ಕೊಡಲಾಗಿಲ್ಲ. ತಮಿಳುನಾಡಿನಲ್ಲಿ ಅವರನ್ನು ಯಾರೂ ಒಪ್ಪಿಕೊಳ್ಳುವುದಿಲ್ಲ ಹಿಂದೂ ಮತಕ್ಕೆ ಪುನರ್ ಮತಾಂತರಗೊಂಡವರು ಈಗ ಪಶ್ಚಾತ್ತಾಪ ಪಡುತ್ತಿದ್ದಾರೆ.

ಪ್ರಶ್ನೆ : ಸಂಪ್ರದಾಯದ ವಿರುದ್ಧ ಹಿಂದೂ ಧರ್ಮದಲ್ಲೇ ಘರ್ಷಣೆ ಹುಟ್ಟಿಕೊಂಡಿರುವಂತೆ. ದಲಿತರು ಬೌದ್ಧಮತಕ್ಕೋ ಇಸ್ಲಾಂಗೋ ಮತಾಂತರಗೊಂಡಾಗ ಸಮಸ್ಯೆ ಉದ್ಭವಿಸುವುದಿಲ್ಲವೆ ?

ಉತ್ತರ : ಸಂಪ್ರದಾಯ ಕುರಿತಂತೆ ಹೇಳಬೇಕೆಂದರೆ ಸಮಸ್ಯೆ ಇರುವುದು ವಯಸ್ಸಾದ ಹಿಂದೂಗಳಿಂದಲೇ. ಯುವಕರು ನಾವು ಏನು ಹೇಳುತ್ತಿದ್ದೇವೋ ಅದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಅರುಣ್ ಕಾಂಬ್ಳೆಯವರ 'ರಾಮಾಯಣ' ಕೃತಿಗೆ ಬರುತ್ತಿರುವ ವಿರೋಧವನ್ನೇ ನೋಡಿ. ಇದು ಬೇರೆಯವರ ಸಂಶೋಧನೆಗಳಿಂದ ಆಧಾರಿತವಾದದ್ದು. ಹಾಗಿರುವಾಗ ಆ ಜನ ಇದನ್ನು ಒಪ್ಪಿಕೊಳ್ಳಲು ಅಥವಾ ಚರ್ಚಿಸಲು ಹೆದರಿಕೊಳ್ಳುವುದೇಕೆ ?

ಡಾ॥ ಅಂಬೇಡ್ಕರ್ ಅವರ ''ರಿಡ್ಲ್ ಆಫ್ ಹಿಂದೂಯಿಸಂ'' ಎಂಬ ಪ್ರಕಟಿತ ಕೃತಿಯನ್ನು ಎರಡು ಸಂಪುಟಗಳಲ್ಲಿ ಹೊರತರಲಾಗುವುದು. ಈ ಕೃತಿ ಹಿಂದೂ ಸಮಾಜವನ್ನು ಬಲವಾಗಿ ಅಲುಗಾಡಿಸುತ್ತದೆ. ತುಂಬಾ ಬಿಗಿಯಾಗಿ ಬರೆದಿರುವ ಕೃತಿಯಿದು.

ಹಿಂದೂ ಸಮಾಜವನ್ನು ಬದಲಿಸಲು ಕನಿಷ್ಠ ನೂರು ಜನ ಅಂಬೇಡ್ಕರ್‌ಗಳೇ ಬೇಕು ಅಷ್ಟಾದರೂ ಹಿಂದೂಗಳು ತಮ್ಮ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ''ಭಾಯಿ ಭಾಯಿ ಕೆಹತೋ ಹೊ, ಔರ್ ಜಬ್ ವಖ್ತ್ ಆತಾ ಹೈ ತೊ ಭಾಯ್ ಕೊ ನೀಚೆ ಭಿಠಾತೆ ಹೊ ಔರ್ ಖುದ್ ಊಪರ್ ಬೈಠೆ ಹೊ''. ಜಾತಿ ವ್ಯವಸ್ಥೆ ಇರುವವರೆವಿಗೂ ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗಲು ಸಾಧ್ಯವಿಲ್ಲ. ದಲಿತರಿಗೆ ಭಾರತೀಯ ಸಮಾಜದಲ್ಲಿ ಯಾವುದೇ ಒಂದು ಸ್ಥಾನ ಇಲ್ಲ. ನಮ್ಮ ಹರಿಜನ ಸಮುದಾಯದಿಂದ ಎಷ್ಟು ಜನ ಮುಖ್ಯಮಂತ್ರಿಗಳಿದ್ದಾರೆ? ಯಾಕೆ ಶ್ರೀಮತಿ ಇಂದಿರಾಗಾಂಧಿಯವರು ಹಿಂದೂ ದೇವಾಲಯಗಳಿಗೇ ಹೋಗುತ್ತಿರುವುದು? ಕಾರಣ ಆಕೆಯ ಹೃದಯದಲ್ಲಿ ಆಕೆ ಹಿಂದುವೇ ಆಗಿರುವುದು.

ನಾವು ಆಡಳಿತ ಸೂತ್ರಗಳನ್ನು ಹಿಡಿಯದೆ ಭಾರತದಲ್ಲಿ ಪ್ರಜಾಪ್ರಭುತ್ವ ಬರಲು ಸಾಧ್ಯವೇ ಇಲ್ಲ ಇದು ನನ್ನ ನಿಷ್ಠುರ ಹಾಗೂ ನಿರ್ಭಯ ಅಭಿಪ್ರಾಯ. ಅಂಬೇಡ್ಕರ್‌ಬಯಸಿದ್ದುದೂ ಅದನ್ನೇ. ಅವರು ಹೇಳಿದ್ದರು ಶೇಕಡ 40ರಷ್ಟಿರುವ ದಲಿತರಿಗೆ (ಹರಿಜನ-ಗಿರಿಜನರು, ಹಿಂದುಳಿದ ವರ್ಗ, ಅಲ್ಪ ಸಂಖ್ಯಾತರು) ಅಧಿಕಾರ ಸೂತ್ರ ಸಿಗದ ಹೊರತು ಪ್ರಜಾಪ್ರಭುತ್ವ ಸಾಧ್ಯವಿಲ್ಲ ಎಂದು.

ನಾಳೆ ಇಂದಿರಾ ಹೋದರೆ ; ಜನ ತಮ್ಮ ಬುದ್ಧಿಯನ್ನು ಯಥಾಪ್ರಕಾರ ಕಳಕೊಂಡರೆ ರಾಜೀವ್ ಗಾಂಧಿ ಅಧಿಕಾರಕ್ಕೆ ಬರುತ್ತಾರೆ. ಈಗಿದ್ದ ಸ್ಥಿತಿಯೆ ಆಗಲೂ ಮುಂದುವರೆಯುತ್ತದೆ.

ಇಂದಿಗೂ ಜನ ಒಂದಾದರೆ ಕಾಂಗ್ರೆಸ್‌ನ್ನು ಹೊರನೂಕಬಹುದು. ಕಾಂಗ್ರೆಸ್ ಅಂದರೆ ಏನು? ಅದೊಂದು ಜಾತೀಯ ಪಕ್ಷ. ಮೇಲ್ವರ್ಗದವರ ಪ್ರಾಬಲ್ಯದಲ್ಲಿರುವಂಥದು. ಈವರೆಗಿನ ಪ್ರಧಾನಿಗಳೆಲ್ಲಾ ಮೇಲ್ವರ್ಗದಿಂದಲೇ ಬರುತ್ತಿದ್ದಾರಲ್ಲ ಯಾಕೆ?

ಕೃಪೆ : **ಭೀಮವಾಣಿ**

ಜಾತಿ ವ್ಯವಸ್ಥೆ ಇರುವವರೆಗೆ ಭಾರತ ಪ್ರಜಾಪ್ರಭುತ್ವ ರಾಷ್ಟ್ರವಾಗದು

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಒಡನಾಡಿ ಡಾ. ಸವಿತಾ ಅಂಬೇಡ್ಕರ್‌ರ ವಿಚಾರಧಾರೆ ಸಂದರ್ಶನ ಇಲ್ಲದೆ:

ಭಾರತದ ಮಹಾನ್ ಪುರುಷನೊಬ್ಬನ ಪತ್ನಿ ಕಳೆದ ಇಪ್ಪತ್ತೈದು ವರ್ಷಗಳಷ್ಟು ದೀರ್ಘಕಾಲ ಮೌನವಾಗಿದ್ದವರು ಈಗ ಇದ್ದಕ್ಕಿದ್ದಂತೆ ಸಿಂಹಿಣಿಯಂತೆ ಅರ್ಭಟಿಸುತ್ತಾ ರಸ್ತೆಗಿಳಿದಿದ್ದಾರೆ. ಎಪ್ಪತ್ತರ ಇಳಿವಯಸ್ಸಿನ ಈ ಗೌರವಾನ್ವಿತ ಬ್ರಾಹ್ಮಣ ಮಹಿಳೆ ಮತ್ತಾರೂ ಅಲ್ಲ; ಭಾರತದ ದಲಿತ ಸಮುದಾಯಕ್ಕೆ ಧ್ವನಿಯಾಗಿದ್ದ ಮಹಾ ಮೇಧಾವಿ 'ಆಧುನಿಕ ಮನು' ಬಾಬಾ ಸಾಹೇಬ್ ಡಾ॥ ಬಿ. ಆರ್. ಅಂಬೆಡ್ಕರ್ ಅವರ ಎರಡನೇ ಪತ್ನಿ ಡಾ॥ ಸವಿತಾ ಅಂಬೇಡ್ಕರ್.

ದಲಿತ ಲೇಖಕ ಅರುಣ್ ಕಾಂಬ್ಳೆ ವ್ಯವಸ್ಥಿತವಾಗಿ ಕಟ್ಟಿರುವ ದಲಿತ ಪಾಂಥರ್ಸ್‌ನ ಮುಂಚೂಣಿಯಲ್ಲಿ ಸವಿತಾ ಹೋರಾಟದ ಕಣಕ್ಕಿಳಿದಿದ್ದಾರೆ ಸವಿತಾ ಈ ಇಳಿವಯಸ್ಸಿನಲ್ಲಿ ಹೋರಾಟಕ್ಕೆ ಇಳಿಯಲು ಕಾರಣಗಳು ಹಲವಾರು. ಅದರಲ್ಲಿ ಮುಖ್ಯವಾದುದು ಮರಾಠವಾಡಾ ವಿಶ್ವವಿದ್ಯಾಲಯವನ್ನು ಅಂಬೆಡ್ಕರ್ ವಿಶ್ವವಿದ್ಯಾನಿಲಯವೆಂದು ಪುನರ್ನಾಮಕರಣ ಮಾಡಬೇಕೆಂಬುದೂ ಒಂದು. ಶ್ರೀ ಶರದ್ ಪವಾರ್ ಮುಖ್ಯ ಮಂತ್ರಿಯಾಗಿದ್ದಾಗ ಮಹಾರಾಷ್ಟ್ರ ವಿಧಾನಸಭೆ, ಪರಿಷತ್ತುಗಳೆರಡೂ ಈ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದರೂ ಸವರ್ಣೀಯರು ಈ ತೀರ್ಮಾನದೆದುರು ಚಳವಳಿಯನ್ನೇ ಎಬ್ಬಿಸಿ, ಪ್ರಜಾಪ್ರತಿನಿಧಿಗಳು ತೆಗೆದುಕೊಂಡ ತೀರ್ಮಾನ ಕಾರ್ಯಗತವಾಗದ ಹಾಗೆಮಾಡಿದರು. ಇದಕ್ಕಾಗಿಯೆ 1978ರಷ್ಟು ಹಿಂದೆಯೇ ಮಹಾರಾಷ್ಟ್ರದಲ್ಲಿ ದಲಿತ ಹಾಗೂ ಸವರ್ಣೀಯರ ನಡುವೆ ಹಿಂಸಾತ್ಮಕ ಹೋರಾಟವೇ ನಡೆದಿತ್ತು. ಈ ಪ್ರಶ್ನೆ ಕೆಲಕಾಲ ತಣ್ಣಗಿದ್ದು ಈಗ ಮತ್ತೆ ಅದು ಜೀವ ಪಡೆದುಕೊಳ್ಳತೊಡಗಿದೆ.

ಇತ್ತೀಚಿಗೆ ದಲಿತ್‌ಪ್ಯಾಂಥರ್ಸ್‌ನ ಬೃಹತ್ ಮೆರವಣಿಗೆಯ ನೇತೃತ್ವ ವಹಿಸಿ ವಿಶ್ವವಿದ್ಯಾನಿಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂದು ರಸ್ತೆಗಿಳಿದು ಪೋಲಿಸ್ ಪ್ರತಿಬಂಧಕ ಆಜ್ಞೆಯನ್ನು ಮುರಿದಾಗ ಡಾ॥ ಸವಿತಾ ಅಂಬೇಡ್ಕರ್‌ರವರು ಬಂಧನಕ್ಕೊಳಗಾಗಿ ಜೈಲುಶಿಕ್ಷೆಯನ್ನು ಅನುಭವಿಸಿದ್ದರು. ಈ ಸಂದರ್ಭದಲ್ಲಿ 'ದಿ ಸಂಡೆ ಅಬ್ಸರ್ವರ್' ಪತ್ರಿಕೆಯ ...ರಹಮಾನ್ ಅವರು ಡಾ॥ಸವಿತಾ ಅಂಬೆಡ್ಕರ್‌ರವರನ್ನು ಸಂದರ್ಶಿಸಿದಾಗ ನಡೆದ ಪ್ರಶ್ನೋತ್ತರಗಳು:

ಪ್ರಶ್ನೆ : 1978ರ ಘಟನೆಯನಂತರ ಸರ್ಕಾರ ಕೆಲವು ರಾಜೀ ಸೂತ್ರಗಳೊಂದಿಗೆ ಮುಂದೆ ಬಂದಿದೆ. ಅದರಲ್ಲಿ ಅಂತುಳೆಯವರು ಮುಂದಿಟ್ಟ ಕೊಂಕಣ ಕೃಷಿವಿಶ್ವವಿದ್ಯಾನಿಲಯಕ್ಕೆ ಅಂಬೇಡ್ಕರ್ ಹೆಸರಿಡಬೇಕೆಂಬುದೂ ಒಂದು. ದಲಿತ ನಾಯಕರಾದ ನಾಮದೇವ ಡಸಾಲ್ ಮತ್ತು ಆರ್.ಎಸ್. ಗವಾಯ್ ಅಂಥವರೂ ಈ ಸಲಹೆಯನ್ನು ಒಪ್ಪಿಕೊಂಡಿದ್ದಾರೆ. ಈ ಬಗ್ಗೆ ನಿಮಗೆ ಏನನ್ನಿಸುತ್ತದೆ ?

ಉತ್ತರ : ನಮಗನ್ನಿಸುತ್ತೆ ಅಂಬೇಡ್ಕರ್ ಹೆಸರನ್ನು ಮರಾಠವಾಡಕ್ಕೇ ಇಡಬೇಕೆಂದು. ನೀವು ಪ್ರತಿ ಜಿಲ್ಲೆಯಲ್ಲೂ ಒಂದೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿ ಅದಕ್ಕೆ ಅಂಬೇಡ್ಕರ್ ಹೆಸರಿಡಬಹುದು. ಆದರೆ ಮರಾಠವಾಡಕ್ಕೆ ತನ್ನದೇ ಆದ ಅನ್ವರ್ಥ ಸಂಕೇತವಿದೆ. ನಾವದನ್ನು ಬಿಟ್ಟುಕೊಡಲು ಸಾಧ್ಯವಿಲ್ಲ.

ಪ್ರಶ್ನೆ : ಮರಾಠವಾಡಕ್ಕೆ ಪರ್ಯಾಯ ಹೆಸರೊಂದನ್ನು ಇಡಲು ಭೋಸಲೆಯವರು ಸೂಚಿಸಿದುದನ್ನು ನೀವು ಒಪ್ಪಿಕೊಳ್ಳುತ್ತೀರಾ ?

ಉತ್ತರ : ಇಲ್ಲ, ಇಲ್ಲ. ಅದು ಎಂದಿಗೂ ಆಗುವುದಿಲ್ಲ, ಸಾಧ್ಯವೇ ಇಲ್ಲ. ಅಷ್ಟಕ್ಕೂ ಅವರು ಆಳುವ ಪಕ್ಷದವರು. ನಾವು ಚಿಕ್ಕವರು. ನಮ್ಮ ಜನರನ್ನು 1978ರಲ್ಲಿ ಬೆದರಿಸಿದ್ದಾರೆ. ಅಂದು ನಿಜಕ್ಕೂ ನಾವು ಬೆಂಕಿಯ ಮೇಲಿದ್ದವರು. ನಮ್ಮನ್ನು ಅತ್ಯಂತ ಅಮಾನುಷವಾಗಿ ನಡೆಸಿಕೊಳ್ಳಲಾಯಿತು ಅಂಥದೊಂದು ಪರ್ಯಾಯ ರೂಪುಗೊಂಡಿದ್ದೇ ಆದರೆ ಮತ್ತೆ ಹಳೆಯ ಘಟನೆಯೇ ಮರುಕಳಿಸುತ್ತದೆ.

ಪ್ರಶ್ನೆ : ಡಾ॥ ಅಂಬೇಡ್ಕರ್ ಮರಾಠವಾಡದಲ್ಲಿ ಕೆಲಸಮಾಡಿದರೆಂದೋ ಇಲ್ಲವೆ ಜಾತಿ ಸಮಸ್ಯೆ ಜೀವಂತವಾಗಿರುವುದನ್ನು ತೋರಿಸಲೆಂದೋ ದಲಿತರು ಹೋರಾಟ ನಡೆಸುತ್ತಿರುವುದು ?

ಉತ್ತರ : ಇದರಲ್ಲಿ ಎರಡು ಗುರಿಯೂ ಇದೆ. ಜಾತಿ ಸಮಸ್ಯೆ ಜೀವಂತವಾಗಿರುವುದನ್ನು ತೋರಿಸದೆ ಹೋದರೆ ಎಂದಿಗೂ ಈ ಸಮಸ್ಯೆ ಬಗೆಹರಿಯುವುದೇ ಇಲ್ಲ. ಇದು ಸಂಕೇತವಲ್ಲದೆ ಮತ್ತೇನು? ಅಂಬೇಡ್ಕರ್ ಹೆಸರಿನ ಪುನರ್‌ನಾಮಕರಣ ಅಂಥ ದೊಡ್ಡ ಸಮಸ್ಯೆಯೇನೂ ಅಲ್ಲ. ಇಷ್ಟಕ್ಕೂ ನೀವು ಇಡೀ ಭಾರತದ ಅರ್ಧಭಾಗಕ್ಕೆ 'ಅಂಬೇಡ್ಕರ್ ದೇಶ ಎಂದು ಹೆಸರಿಟ್ಟರೂ ಅವರು ಮಾಡಿದ ಸಾಧನೆಗೆ ಎಂದೂ ಸಾಟಿಯಾಗಲಾರದು. ಅಂಬೇಡ್ಕರ್ ತಮ್ಮ ಅನಾರೋಗ್ಯದಲ್ಲೂ ಒಬ್ಬೊಂಟಿಗರಾಗಿ ಸಂವಿಧಾನವನ್ನು ರಚಿಸಿದರು, ಮತ್ತು ಹಿಂದೂ ಸಮಾಜಕ್ಕೆ ಅಘಾತ ಕೊಟ್ಟರೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಪ್ರಶ್ನೆ : ದಲಿತರು ಸ್ವತಂತ್ರರಾದಾಗಲೇ ಭಾರತದಲ್ಲಿ ಪ್ರಜಾಪ್ರಭುತ್ವದ ಕನಸು ನನಸಾಗುವುದೆಂಬುದನ್ನು ಅಂಬೇಡ್ಕರ್‌ರವರು ಕನಸು ಕಂಡಿರಬೇಕಲ್ಲ ?

ಉತ್ತರ : ಮೊದಲನೆಯನಾಗಿ ನಿಮಗೆ ಹೇಳಬೇಕೆಂದರೆ ಅಂಬೇಡ್ಕರ್‌ರವರು ಯಾವತ್ತೂ ಕನಸುಗಳನ್ನು ಕಂಡವರಲ್ಲ. ಅವರು ಕನಸು ರಹಿತ ವ್ಯಕ್ತಿಯಾಗಿದ್ದರು. ಆದ್ದರಿಂದ ದಯವಿಟ್ಟು 'ಕನಸು' ಪದವನ್ನು ಉಪಯೋಗಿಸಬೇಡಿ. ಅವರ ಆರಂಭದ ದಿನಗಳಲ್ಲಿ ಮಹಾರ್ ಸತ್ಯಾಗ್ರಹವನ್ನು ಆರಂಭಿಸಿದಾಗ ತುಂಬಾ ಕುತೂಹಲದಿಂದ ಇದ್ದರು. ಮುಖ್ಯವಾಗಿ ಅವರು ನ್ಯಾಯ ಸಚಿವರಾಗಿದ್ದಾಗ ಮತ್ತು ಸಂವಿಧಾನ ರಚಿಸುವ ಅವಕಾಶ ಸಿಕ್ಕಿದಾಗ ನಮ್ಮೆಲ್ಲರಿಗೂ ಲಾಭ ಸಿಕ್ಕಿ ಪರಿಸ್ಥಿತಿ ಸುಧಾರಿಸಬಹುದೆಂದು ತುಂಬು ಭರವಸೆಯಿಂದಿದ್ದರು. ಆದರೆ ಅವರಿಗೆ ನಿಜಕ್ಕೂ ಅಘಾತವಾದದ್ದು ಹಿಂದೂ ಶಾಸನ ಮಸೂದೆ ಲೋಕಸಭೆಯಲ್ಲಿ ತಿರಸ್ಕರಿಸಲ್ಪಟಾಗ. ನನಗಿನ್ನೂ ಚೆನ್ನಾಗಿ ನೆನಪಿದೆ: ಅಮೃತ್‌ಕೌರ್ 1951ರ ಚುನಾವಣೆಗೆಂದು ಅಲಹಾಬಾದಿಗೆ ಭೇಟಿ ನೀಡಿದ್ದಾಗ ಜವಹರಲಾಲ್ ನೆಹರೂ ಅವರ ಕಿವಿಯಲ್ಲಿ ಉಸುರಿದರು : "ಹಿಂದೂ ಶಾಸನ ಮಸೂದೆಯನ್ನೇನಾದರೂ ಒಪ್ಪಿಕೊಂಡಿದ್ದೇ ಆದಲ್ಲಿ ಹಿಂದೂಗಳ ಮತ ಚುನಾವಣೆಯಲ್ಲಿ ಪ್ರತಿಕೂಲವಾಗುತ್ತದೆಂದು." ಈ ಕಾರಣಕ್ಕಾಗಿಯೇ ಅಂಬೇಡ್ಕರ್‌ರವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಇತ್ತಿದ್ದು. ಹಾಗಾಗದೇ ಹೋಗಿದ್ದಲ್ಲಿ ಅವರು ಮನುವಿನ ಜಾಗವನ್ನು ಆಕ್ರಮಿಸುತ್ತಿದ್ದರು. ನನ

(5ನೇ ಪುಟಕ್ಕೆ)

ಜಾತಿ ವಿನಾಶಕ್ಕಾಗಿ ಹಿಂದುಳಿದ ವರ್ಗಗಳ ಚಳವಳಿ

ಡಿಸೆಂಬರ್ ೧೧ ಮತ್ತು ೧೨ನೇ ತಾರೀಖಿನಂದು ಪರಿಶಿಷ್ಟ ಜಾತಿಗಳು ಮತ್ತು ಹಿಂದುಳಿದ ವರ್ಗಗಳ ರಕ್ಷಣೆಗಾಗಿ ಅಖಿಲ ಭಾರತ ಸಮ್ಮೇಳನವನ್ನು ಮದರಾಸಿನಲ್ಲಿ ನಡೆಸಲಾಯಿತು. ೧೦,೦೦೦ಕ್ಕೂ ಹೆಚ್ಚು ಜನರು ಹಾಜರಿದ್ದರು. ಎಲ್ಲಾ ಪಕ್ಷಗಳ ನಾಯಕರುಗಳು ಭಾಗವಹಿಸಿದ್ದರು. ಅವರೆಲ್ಲರೂ ಬ್ರಾಹ್ಮಣ ಧರ್ಮದ ಮೇಲೆ ಯುದ್ಧ ಸಾರಿದರು ಹಿಂದುಳಿದ ವರ್ಗಗಳ ಏಳಿಗೆಗಾಗಿ 'ಮಂಡಲ್' ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಕೇಂದ್ರ ಸರ್ಕಾರ ಸಂಸತ್ತಿನ ಮುಂದಿನ ಅಧಿವೇಶನಕ್ಕೆ ಮೊದಲೇ ಜಾರಿಗೊಳಿಸಬೇಕೆಂದು ಆಗ್ರಹ ಪಡಿಸಿದರು. ಮಂಡಲ್ ಸಮಿತಿಯು ಸರ್ಕಾರಕ್ಕೆ ತನ್ನ ವರದಿಯನ್ನು ಸಲ್ಲಿಸಿ ಎರಡು ವರ್ಷಗಳಿಗಿಂತಲೂ ಹೆಚ್ಚಾಯಿತು. ಅದನ್ನು ಬಹುಮಟ್ಟಿಗೆ ಕಸದ ಬುಟ್ಟಿಗೆ ಸರ್ಕಾರ ಎಸೆದಿರುವಂತೆ ಕಾಣುತ್ತದೆ. ಜನಸಂಖ್ಯೆಯ ಶೇಕಡ ೫೨ರಷ್ಟು ಇತರ ಹಿಂದುಳಿದ ವರ್ಗಗಳಿಗೆ ಶೇಕಡಾ 27ರಷ್ಟು ಮೀಸಲಾತಿಯನ್ನು ಸಮಿತಿಯು ಶಿಫಾರಸ್ಸು ಮಾಡಿದೆ. 'ದ್ರಾವಿಡ ಕಳಗಂ'ನ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಕೆ. ವೀರಮಣಿ ಈ ಸಮ್ಮೇಳನದಲ್ಲಿ ನಿಲುವಳಿಯನ್ನು ಮಂಡಿಸಿದರು. ಈ ಸಮ್ಮೇಳನವನ್ನು 'ದ್ರಾವಿಡ ಕಳಗಂ' ಏರ್ಪಡಿಸಿತ್ತು. ಶ್ರೀ ವೀರಮಣಿ ಅವರು "ಸಮಿತಿಯ ವರದಿಯ ಬಗ್ಗೆ ಹೆಚ್ಚಿನ ಚರ್ಚೆ ಅನಗತ್ಯ"ವೆಂದರು. ಜಾತಿಯ ಆಧಾರದ ಮೇಲೆಯೇ ಹಿಂದುಳಿದಿರುವಿಕೆಯನ್ನು ತೀರ್ಮಾನಿಸಬೇಕೆಂಬ ಸಮಿತಿಯ ಮಾನದಂಡವನ್ನು ಅವರು ಸರಿ ಎಂದರು. 'ಬಿಹಾರ ರಾಜ್ಯದ ಮಾಜಿ ಮುಖ್ಯಮಂತ್ರಿ ಶ್ರೀ ಕರ್ಪೂರಿಠಾಕೂರ್ 'ಬ್ರಾಹ್ಮಣ ಜಾತಿಯ ಪ್ರಧಾನಮಂತ್ರಿ ಇರುವವರೆಗೆ ಅಸ್ಪೃಶ್ಯರಿಗೆ, ಶೂದ್ರರಿಗೆ, ಗಿರಿಜನರಿಗೆ ಭವಿಷ್ಯವಿಲ್ಲ'ವೆಂದು ಸ್ಪಷ್ಟವಾಗಿ ಹೇಳಿದರು. ಎಲ್ಲಾ ಕೆಳವರ್ಗದ ಜಾತಿಗಳೂ ಅಲ್ಪಸಂಖ್ಯಾತರ ಜೊತೆ ಕೂಡಿಕೊಂಡು ಬ್ರಾಹ್ಮಣಿಕೆಯನ್ನು ಗೆಲ್ಲಬೇಕೆಂದು ಅವರು ಆಶಿಸಿದರು. ಕೇಂದ್ರದ ಮಾಜೀ ಸಚಿವರಾದ ಧನಿಕ್ ಮಂಡಲ್ ಮತ್ತು ಚಂದ್ರಜಿತ್ ಯಾದವ್, ಇಬ್ಬರೂ ಮಂಡಲ್ ಸಮಿತಿಯ ವರದಿಯ ಬಗ್ಗೆ ಕ್ರಮ ತೆಗೆದುಕೊಳ್ಳದಿದ್ದರೆ ಕುಪಿತ ಹಿಂದುಳಿದ ವರ್ಗಗಳು ಸಂಸತ್ತನ್ನು ಘೇರಾವ್ ಮಾಡುತ್ತವೆಂದು ಹೇಳಿದರು. ಅಖಿಲ ಭಾರತ ಕಾಂಗ್ರೆಸ್ ಸಮ್ಮೇಳನಗಳನ್ನು ಸಂಘಟಿಸಿದ್ದೇನೆ;ಆದರೆ ಮದ್ರಾಸ್‌ನಲ್ಲಿ ಪೆರಿಯಾರ್ ಪೆಂಡಾಲ್‌ನಲ್ಲಿ ನಡೆದ ಈ ಸಮ್ಮೇಳನವು ತಾವು ನೋಡಿದ ಅತ್ಯಂತ ದೊಡ್ಡದೆಂದು ಯಾದವ್ ಹೇಳಿದರು. ಮಂಡಲ್ ಸಮಿತಿಯ ವರದಿಯ ಮೇಲೆ ನಡೆದ ಈ ಮೊಟ್ಟಮೊದಲು ಸಮ್ಮೇಳನಕ್ಕೆ ದೇಶದ ಎಲ್ಲಾ ಭಾಗಗಳಿಂದಲೂ 500ಕ್ಕೂ ಹೆಚ್ಚು ಮಂದಿ ಪ್ರತಿನಿಧಿಗಳು ಬಂದಿದ್ದರು. ಡಿಸೆಂಬರ್ 11ರಂದು ಈ ಸಮ್ಮೇಳನದ ಸಲುವಾಗಿ ತಮಿಳುನಾಡು ಸರ್ಕಾರವು ರಜಾವನ್ನು ಘೋಷಿಸಿತ್ತು. ಡಿಸೆಂಬರ್ 12ರಂದು 'ದ್ರಾವಿಡ ಕಳಗಂ' ಒಂದು ಮೈಲುದ್ದದ ಮೆರವಣಿಗೆಯನ್ನು ಮದರಾಸಿನ ಬೀದಿಗಳಲ್ಲಿ ಏರ್ಪಡಿಸಿತ್ತು. ಸಮ್ಮೇಳನವನ್ನು ಉದ್ದೇಶಿಸಿ ಮಾಜಿ ಮುಖ್ಯಮಂತ್ರಿ ಕರುಣಾನಿಧಿ, ಸಂಸತ್ ಸದಸ್ಯ ಮತ್ತು ತಮಿಳುನಾಡಿನ ಮುಸ್ಲಿಂ ಲೀಗಿನ ಅಧ್ಯಕ್ಷ ಅಬ್ದುಲ್ ಸಮದ್, ದಲಿತ ವಾಯ್ಸ್‌ನ ಸಂಪಾದಕ ವಿ. ಟಿ. ರಾಜಶೇಖರ್ ಅಂಬೇಡ್ಕರ್ ಜನತಾ ಕಲ್ಯಾಣ ಚಳವಳಿಯ ಎಂ ಕಮಲಾಕಣ್ಣನ್, ಕ್ರಿಶ್ಚಿಯನ್ನರ ಪ್ರತಿನಿಧಿಗಳು, ದಲಿತರ ಪ್ರತಿನಿಧಿಗಳು, ಗಿರಿಜನರ ಪ್ರತಿನಿಧಿಗಳು, ಮಹಿಳೆಯರ ಪ್ರತಿನಿಧಿಗಳು ಮತ್ತು ಇತರ ಜಾತಿಗಳ ನಾಯಕರುಗಳು ಮಾತನಾಡಿದರು. ತಮಿಳುನಾಡು ವಿಧಾನಸಭೆಯ ಸ್ಪೀಕರ್ ಕೆ. ರಾಜಾರಾಂ, ಡಿಸೆಂಬರ್ 11ರಂದು ಮಧ್ಯಾಹ್ನ ನಡೆದ ಗೋಷ್ಠಿಯನ್ನು ಉದ್ಘಾಟಿಸಿದರು. ಈ ಗೋಷ್ಠಿಯಲ್ಲಿ ಸಂಸತ್ ಸದಸ್ಯ ಡಿ. ಪಿ. ಯಾದವ್, ಮದ್ರಾಸ್ ವಿಶ್ವವಿದ್ಯಾನಿಲಯದ ಮಾಜಿ ಉಪಕುಲಪತಿ ಎಸ್. ಡಿ. ಸುಂದರವಡಿವೇಲು, ಟಿ. ಎನ್. ಅನಂತನಾಯ್ಕ ಸಂಸತ್ ಸದಸ್ಯ ಮತ್ತು ಹಿಂದುಳಿದ ವರ್ಗಗಳ ಒಕ್ಕೂಟದ ರಾಷ್ಟ್ರೀಯ ಸಂಘದ ಕಾರ್ಯದರ್ಶಿ ಆರ್. ಗುಪ್ತ, ಕ್ರೈಸ್ತ ಬೆಸ್ತ ನಾಯಕ ಎಡ್ಮಂಡ್ ಮಾತನಾಡಿದರು. ದೆಹಲಿಯ ಮಾಜಿ ಮುಖ್ಯಮಂತ್ರಿ ಮತ್ತು ದೆಹಲಿಯ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಂಘದ ಅಧ್ಯಕ್ಷ ಬ್ರಹ್ಮಪ್ರಕಾಶ ಈ ಗೋಷ್ಠಿಯಅಧ್ಯಕ್ಷರಾಗಿದ್ದರು. ಅವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹಿಂದೂಧರ್ಮ ಶಾಸ್ತ್ರಗಳನ್ನು, ಭಾರತದ ಜನಸಂಖ್ಯೆಯ 80% ಮಂದಿಯನ್ನು ಸೇವಕರ ಸ್ಥಾನಕ್ಕೆ ಇಳಿಸಿರುವ ಜಾತಿಯ ವ್ಯವಸ್ಥೆಯನ್ನು ಉಗ್ರವಾಗಿ ಖಂಡಿಸಿದರು ಪ್ರಜಾಪ್ರಭುತ್ವ ಅಪಾಯಸ್ಥಿತಿಯಲ್ಲಿದೆ, ಏಕೆಂದರೆ ಭಾರತವನ್ನು ಆಳುವ ಮೇಲುಜಾತಿಯ ಶೇ10 ಮಂದಿ ದೇಶದ ಹಿತಕ್ಕಿಂತ ತಮ್ಮ ಹಿತಾಶಕ್ತಿಯನ್ನು ಅತ್ಯಂತ ದೊಡ್ಡದೆಂದು ಪರಿಗಣಿಸಿದ್ದಾರೆ. ಹಿಂದುಳಿದ ವರ್ಗಗಳ ಚಳವಳಿ ಜಾತಿ ಆಧಾರದ ಮೇಲೆ ನಡೆದರೂ, ಜಾತಿ ವಿನಾಶವೇ ಅದರ ಗುರಿ ಎಂದು ಸ್ಪಷ್ಟಪಡಿಸಿದರು. ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಂಘದ ಹೊಸ ಪತ್ರಿಕೆಯಾದ "ಬುನಿಯಾದಿ ಸಂಘರ್ಷ" ವನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಲಾಯಿತು.

—ದಲಿತವಾಯ್ಸ್

ನಿಷ್ಠೆ ಮತ್ತು ಬಡ್ತಿ

ಮೈಸೂರು ಜಿಲ್ಲೆ: ಬನ್ನೂರು ಹೋಬಳಿಯ ಹೆಗ್ಗೂರು ಮಾಧ್ಯಮಿಕ ಶಾಲೆಯಲ್ಲಿ ಬಿ. ಎಂ. ಶ್ರೀಪತಿರಾವ್ ಎಂಬ ದಲಿತ ಅಧ್ಯಾಪಕ ಸುಮಾರು 11 ವರ್ಷಗಳಿಂದಲೂ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ಹಿಂದಿ ವಿದ್ವಾನ್‌ರಾಗಿದ್ದು ಬಿ.ಎ. ಡಿಗ್ರಿಯನ್ನು 2ನೇ ರ್‍ಯಾಂಕ್‌ನಲ್ಲಿ ಪಾಸು ಮಾಡಿದ್ದು ಎಂ.ಎ. ಹಿಂದಿಯನ್ನು 2ನೇ ದರ್ಜೆಯಲ್ಲಿ ಪಾಸು ಮಾಡಿದ್ದಾರೆ. ಅಲ್ಲದೇ ಇವರು ಸಾಹಿತ್ಯ ಕ್ಷೇತ್ರದಲ್ಲಿಯೂ ಆಸಕ್ತಿಯುಳ್ಳವರಾಗಿದ್ದು, "ಹಗರಣ" ಮತ್ತು "ಕಬೀರ್" ಎಂಬ ಎರಡು ಪುಸ್ತಕಗಳನ್ನು ಈಗಾಗಲೇ ಪ್ರಕಟಗೊಳಿಸಿದ್ದಾರೆ. ಇವರಮೂರನೇ ಪುಸ್ತಕ "ಹೊಂಗಿರಣ" ಈಗ ಅಚ್ಚಿನಲ್ಲಿದೆ.

ಇವರ ಈ ಎಲ್ಲಾ ಬೆಳವಣಿಗೆಯನ್ನು ಸಹಿಸದ ಮೈಸೂರು ವಿಭಾಗದ ಜಂಟಿ ನಿರ್ದೇಶಕರು (ಜಾತಿ ನಿರ್ದೇಶಕರು) ಇವರನ್ನು ಹೀನಾಯವಾಗಿ ಕಾಣುತ್ತಿದ್ದಾರೆ. ಅವರಿಗೆ ದಕ್ಕಬೇಕಾದ ಬಡ್ತಿಯನ್ನು ದಕ್ಕದಂತೆ ಮಾಡಿದ್ದು, ಇವರ ಶೈಕ್ಷಣಿಕ ಅರ್ಹತೆಗೆ ಸಮನಾಗದ ಬ್ರಾಹ್ಮಣ ಜನಾಂಗಕ್ಕೆ ಸೇರಿರುವ ನಾರಾಯಣ, ಬಿ.ಎಸ್.ಸತ್ಯಾಂಬ ಮತ್ತು ಎಂ.ಎನ್ ನೀಲಾಂಬ ಇವರುಗಳಿಗೆ 1982ರ ಜೂನ್ ಸಾಲಿನ ಬಡ್ತಿಯಲ್ಲಿ, ಹೈಸ್ಕೂಲು ಮಾಸ್ತರರಾಗಿ ಬಡ್ತಿ ನೀಡಲಾಗಿದೆ.

"ಹರಿಜನ—ಗಿರಿಜನರಿಗೆ ಹುದ್ದೆಗಳಲ್ಲಿ 18% ಕಾದಿರಿಸುವುದಲ್ಲದೇ ಬಡ್ತಿಯಲ್ಲೂ 18%ನ್ನು ಕಾದಿರಿಸಲಾಗಿರುವುದು." ಎಂಬ ಸರ್ಕಾರದ ಜಾಹಿರಾತುಗಳು, ಪ್ರಚಾರಗಳು ಹಾಗೂ ಸಾದನೆಗಳು ಶ್ರೀಪತಿ ರಾವ್‌ರಂತಹ ಜನರ ಪಾಲಿಗೆ ಎಷ್ಟು ಸತ್ಯವಾಗಿವೆ ಎಂಬುದನ್ನು ಯೋಚಿಸಬೇಕಾಗಿದೆ.